**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 8/2014**

**ದೋ.ಸಾ. : 34 ಫ್ರಾ.ಸಾ. : 23**

ಸಾಕ್ಷಿಯ ಹೆಸರು : ಚಂದ್ರಕಾಂತ
ತಂದೆಯ ಹೆಸರು : ಗೋವಿಂದ ನಾಯ್ಕ
ವಯಸ್ಸು : 59 ವರ್ಷ
ಉದ್ಯೋಗ : ವಲಯ ಅರಣ್ಯಾಧಿಕಾರಿ , ಭಾಗ್ವತಿ, ಹಳಿಯಾಳ
ವಾಸ : ಹಳಿಯಾಳ

**ದಿನಾಂಕಃ 06-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಚೇರಿ, ಅಂಕೋಲಾದಲ್ಲಿ ವಲಯ ಅರಣ್ಯಾಧಿಕಾರಿಯಾಗಿ ದಿನಾಂಕ 21.05.2007 ರಿಂದ 10.10.2010 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 05.05.2010 ರಂದು ಲೋಕಾಯುಕ್ತ ಪೊಲೀಸ್ ನವರು ಬೆಳಿಗ್ಗೆ 9.45 ಗಂಟೆಗೆ ನಮ್ಮ ಕಚೇರಿಗೆ ಬಂದಿದ್ದರು. ಆಗ ನಾನು ಕಚೇರಿಯಲ್ಲಿ ಉಪಸ್ಥಿತನಿದ್ದೆ. ಆಗ ಲೋಕಾಯುಕ್ತ ಅಧಿಕಾರಿಗಳಾದ ಆರಕ್ಷಕ ನಿರೀಕ್ಷಕರು, ಚಾಮರಾಜ ನಗರ, ಪಂಚರು , ಸಿಬ್ಬಂದಿ ಇದ್ದರು. ಇನ್ನೂ ಬೇರೆ ಸಿಬ್ಬಂದಿ ಅಧಿಕಾರಿಗಳು ಸಹ ಇದ್ದರು. ಆ ಸಮಯದಲ್ಲಿ ನಮ್ಮ ಕಚೇರಿಯಲ್ಲಿ ನರೇಂದ್ರ ಹಿತ್ತಲಮಕ್ಕಿರವರು ಅಂದರೆ ಆರೋಪಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದರು. ಲೋಕಾಯುಕ್ತ ಪೊಲೀಸ್ ನವರು ಆ ದಿನ ಬಂದಾಗ ಆರೋಪಿ ಕಚೇರಿಯಲ್ಲಿ ಇರಲಿಲ್ಲ. ಲೋಕಾಯುಕ್ತ ಅಧಿಕಾರಿರವರು ಆರೋಪಿಯ ಕಚೇರಿಯ ಗುಮಾಸ್ತನಾದ ದೋಸಾ-33 ರವರಿಗೆ ಅವರ ಬಳಿ ಚಾವಿ ಇದ್ದ ಕಾರಣ ಆರೋಪಿಯ ಕಚೇರಿ ಬಾಗಿಲು ತೆಗೆಯುವಂತೆ ಹೇಳಿದರು. ಆ ಪ್ರಕಾರವಾಗಿ ದೋಸಾ-33 ರವರು ಆರೋಪಿಯ ಕೊಠಡಿ ಬಾಗಿಲನ್ನು ತೆರೆದರು. ನಾನು ಆಗ ಆರೋಪಿಯ ಕೊಠಡಿಯ ಬಾಗಿಲಿನಲ್ಲಿ ಹೊರಗಡೆ ಇದ್ದೆ. ನನ್ನ ಕೊಠಡಿ ಆರೋಪಿಯ ಕೊಠಡಿ ಪಕ್ಕದಲ್ಲಿ ಇತ್ತು . ಲೋಕಾಯುಕ್ತ ಪೊಲೀಸ್ ನವರು ಆರೋಪಿಯ ಕೊಠಡಿಯ ಒಳಗೆ ಹೋಗಿ ಅಲ್ಲಿ ಎಲ್ಲಾ ಪರಿಶೀಲನೆ ಮಾಡಿದರು. ಅಲ್ಲಿ ನೋಡಿದ್ದನ್ನು

ಅಲ್ಲಿಯೇ ಬೆರಳಚ್ಚು ಮಾಡಿ ಪಂಚನಾಮೆ ಮಾಡಿದರು. ಪಂಚನಾಮೆ ಮಾಡಲು ಲೋಕಾಯುಕ್ತ ಪೊಲೀಸ್ ನವರು ಅವರದ್ದೇ ಲ್ಯಾಪಟಾಪ್ ಮತ್ತು ಪ್ರಿಂಟರ್ ತಂದಿದ್ದರು. ನಮ್ಮ ಕಚೇರಿಯಲ್ಲಿ ವಿದ್ಯುತ್ ಸಂಪರ್ಕ ಇತ್ತು . ಆರೋಪಿಯ ಕೊಠಡಿಯಲ್ಲಿ ಮೇಜು ಕುರ್ಚಿ , ಕಚೇರಿಯ ಕಡತ ಬಿಟ್ಟರೆ ಬೇರೆ ಏನೂ ಇರಲಿಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ ಎನ್ ಎನ್ ರವರಿಂದ**

2. ಪಂಚನಾಮೆ ಸಮಯದಲ್ಲಿ ಆರೋಪಿಗೆ ಮತ್ತು ಅವನ ಕುಟುಂಬದವರಿಗೆ ಸಂಬಂಧಿಸಿದ ಯಾವುದೇ ವೈಯಕ್ತಿಕ ಕಡತಗಳು ಮತ್ತು ದಾಖಲಾತಿಗಳು ಸಿಕ್ಕಿರುವುದಿಲ್ಲ. ಆ ವಿಚಾರವನ್ನು ಪಂಚನಾಮೆಯಲ್ಲಿ ಬರೆದಿರುತ್ತಾರೆ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ